ಶಿಡ್ಲಘಟ್ಟದಿಂದ ಬೆಂಗಳೂರಿಗೆ ತಡೆರಹಿತ ಬಸ್ಸುಗಳನ್ನು ಹಾಕುವುದು

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿಡ್ಲಘಟ್ಟದಿಂದ ಬೆಂಗಳೂರಿಗೆ ಬರುತ್ತಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಂಜೆಯ ತಡೆರಹಿತ ಬಸ್ಸನ್ನು ನಿಲ್ಲಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಿಂದಾಗಿ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಸಾಯಂಕಾಲದಲ್ಲಿ ಶಿಡ್ಲಘಟ್ಟದಿಂದ ಬೆಂಗಳೂರಿಗೆ ತಡೆರಹಿತ ಬಸ್ಸು ಇರುವುದಿಲ್ಲ ಆದರೆ ಒಂದು ಬಸ್ಸು ರಾತ್ರಿ ೮–೩೦ ಗಂಟೆಗೆ ಬೆಂಗಳೂರು ಬಿಟ್ಟು ಶಿಡ್ಲಘಟ್ಟಕ್ಕೆ ಹೋಗುತ್ತಿದ್ದ ತಡೆರಹಿತ ವಾಹನವನ್ನು ಪ್ರಯಾಣಿಕರ ಕೋರಿಕೆ ಮೇರೆಗೆ ವಿಜಯಪುರದಲ್ಲಿ ನಿಂತು ಹೋಗುವಂತೆ ಮಾಡಿ ಅತಿ ವೇಗಧೂತ (ಫಾಸ್ಟ್ ಎಕ್ಸ್‌ಪ್ರೆಸ್) ವಾಹನವನ್ನಾಗಿ ಓಡಿಸಲಾಗುತ್ತಿದೆ.

ಆ) ಈ ವಾಹನವನ್ನು ಓಡಿಸುತ್ತಿರುವುದರಿಂದ ಸಾರ್ವಜನಿಕರಿಗೆ ಯಾವ ವಿಧವಾದ ತೊಂದರೆಯೂ ಆಗುತ್ತಿಲ್ಲ.

ಇ) ಮೇಲಿನ ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

೧೬೫ (೧೮) ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಂಗಳೂರು ನಗರ ಸಾರಿಗೆಗೆ ಸೇರಿದ ಬಸ್ಸುಗಳ ಇತ್ತೀಚಿನ ಸಂಖ್ಯೆ ಎಷ್ಟು ? ಹಾಗೂ ೧೯೭೧ ರಿಂದ ೧೯೮೨ನೇ ಸಾಲಿನವರೆಗೆ ಬೆಂಗಳೂರು ನಗರ ಸಾರಿಗೆಗೆ ಸೇರಿದ್ದ ಬಸ್ಸುಗಳ ಸಂಖ್ಯೆ ಎಷ್ಟು ? (ಪ್ರತಿ ವರ್ಷದ ಅಂಕಿ ಅಂಶಗಳನ್ನು ಕೊಡತಕ್ಕದ್ದು)

ಆ) ೧೯೭೧ ರಿಂದ ಇಲ್ಲಿಯವರೆಗೂ ಜಖಂ ಆದ ಮತ್ತು ಬೆಂಕಿಗೆ ಆಹುತಿಯಾದ ಬಸ್ಸುಗಳ ಸಂಖ್ಯೆ ಎಷ್ಟು ? (ಪ್ರತಿ ವರ್ಷದ ಅಂಕಿ ಅಂಶಗಳನ್ನೊದಗಿಸತಕ್ಕದ್ದು)

ಇ) ಮೇಲ್ಕಾಣಿಸಿದ ಕಾರಣಗಳಿಂದಾಗಿ ಬೆಂಗಳೂರು ನಗರ ಸಾರಿಗೆ ವ್ಯವಸ್ಥೆ ಅನುಭವಿಸಿದ ನಷ್ಟ ಎಷ್ಟು ?

ಈ) ೧೯೭೧ ರಿಂದ ೧೯೮೨ರ ವರೆಗೆ ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಯು ಲಾಭವನ್ನು ಗಳಿಸಿದೆಯೇ ಅಥವಾ ನಷ್ಟ ಹೊಂದಿದೆಯೇ ? (ಪ್ರತಿ ವರ್ಷದ ಲಾಭ ಅಥವಾ ನಷ್ಟದ ಅಂಕಿ ಅಂಶಗಳನ್ನು ಕೊಡತಕ್ಕದ್ದು)

ಉ) ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಯು ಒಂದು ಲಾಭದಾಯಕವಾದ ಸಾರಿಗೆ ಸಂಸ್ಥೆಯನ್ನಾಗಿ ಮಾಡಲು ಸರಕಾರದವರು ತೆಗೆದುಕೊಳ್ಳುತ್ತಿರುವ ಕ್ರಮಗಳೇನು ?

ಊ) ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಯ ಬಸ್ಸುಗಳನ್ನು ಜಖಂಗೊಳಿಸಿದ ಅಥವಾ ಬೆಂಕಿಗೆ ಆಹುತಿಗೊಳಿಸಿದ ಸಂದರ್ಭಗಳಲ್ಲಿ ಆದ ನಷ್ಟವನ್ನು ತುಂಬಿಕೊಳ್ಳಲು ಬೆಂಗಳೂರ ನಾಗರೀಕರ ಮೇಲೆ ದಂಡವನ್ನು ವಿಧಿಸಿ ಅದನ್ನು ವಸೂಲು ಮಾಡಲು ಸೂಕ್ತವಾದ ಕ್ರಮಗಳನ್ನು ಸರ್ಕಾರವು ಕೈಗೊಳ್ಳುವುದೇ ? ಹಾಗೂ ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಗೆ ಸೇರಿದ ಬಸ್ಸುಗಳು ಸಾರ್ವಜನಿಕ ಆಸ್ತಿಯೆಂಬುದನ್ನು ನಾಗರೀಕರು ತಿಳಿದುಕೊಳ್ಳಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ ?

ಋ) ಹಾಗಿದ್ದಲ್ಲಿ, ಎಷ್ಟು ಬೇಗ ಕ್ರಮಗಳನ್ನು ಕೈಗೊಳ್ಳಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು).—

ಅ)

ವರ್ಷ	ಷೆಡ್ಯೂಲ್‌ಗಳು	ಬಸ್ಸುಗಳ ಸಂಖ್ಯೆ
೧೯೭೧–೭೨	೩೨೫	೪೦೨
೧೯೭೨–೭೩	೩೨೮	೩೭೯
೧೯೭೩–೭೪	೩೪೭	೪೧೩
೧೯೭೪–೭೫	೩೭೬	೪೩೫
೧೯೭೫–೭೬	೪೨೪	೫೦೩
೧೯೭೬–೭೭	೪೯೦	೬೪೮
೧೯೭೭–೭೮	೪೯೮	೬೦೨
೧೯೭೮–೭೯	೫೩೪	೬೩೫
೧೯೭೯–೮೦	೫೫೬	೭೦೯
೧೯೮೦–೮೧	೬೫೬	೮೨೫
೧೯೮೧–೮೨	೭೭೫	೯೨೨
೧೯೮೨–೮೩	೯೦೪	೯೮೬
೧೯೮೩–೮೪		
ತಾ. ೧೮-೮-೮೩ರ ವರೆಗೆ)	೯೪೩	೧೦೨೪

ಆ) ಲಬ್ದವಿರುವ ಅಂಕಿ ಅಂಶಗಳನ್ನು ಈ ಕೆಳಗೆ ಕೊಟ್ಟಿವೆ.

ವರ್ಷ	ಜಖಂ ಆದ ವಾಹನಗಳು	ಬೆಂಕಿಗೆ ಆಹುತಿ ಯಾದ ವಾಹನಗಳು
೧೯೭೭	೧೭೭	—
೧೯೭೮	೬೭	೭
೧೯೭೯	೩೩	—
೧೯೮೦	೧೪	—
೧೯೮೧	೯೧	೧೯
೧೯೮೨	೨೫೯	೧೨
೧೯೮೩		
ತಾ. ೩೧-೭-೧೯೮೩ರ ವರೆಗೆ)	೬೯	೩ (ಭಾಗಶಃ ಸುಟ್ಟು ಹೋಗಿರುವುದು)
ಒಟ್ಟು	೭೧೦	೪೧

ಇ) ಸದರಿ ನಷ್ಟದ ವಿವರ ಈ ಕೆಳಕಂಡಂತಿದೆ:—

ವರ್ಷ	ನಷ್ಟದ ಮೊತ್ತ (ರೂ. ಗಳಲ್ಲಿ)
೧೯೭೭	೫೫,೦೦೦-೦೦
೧೯೭೮	೪೨,೦೦೦-೦೦
೧೯೭೯	೧೬,೦೦೦-೦೦
೧೯೮೦	೨೫,೦೦೦-೦೦
೧೯೮೧	೨೯,೫೦,೦೦೦-೦೦
೧೯೮೨	೧೦,೭೦,೦೦೦-೦೦
೧೯೮೩	೭೫,೦೦೦-೦೦
(ತಾ. ೩೧-೭-೮೩ರವರೆಗೆ	
ಒಟ್ಟು ರೂ.	೪೭,೩೩,೦೦೦-೦೦

ಈ) ನಷ್ಟದ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ :

ವರ್ಷ	ನಷ್ಟ (ಲಕ್ಷ ರೂ. ಗಳಲ್ಲಿ)
೧೯೭೧–೭೨	೫೦.೮೦
೧೯೭೨–೭೩	೪೦.೪೮
೧೯೭೩–೭೪	೭೨.೫೯
೧೯೭೪–೭೫	೭೨.೦೦
೧೯೭೫–೭೬	೯೯.೯೩
೧೯೭೬–೭೭	೭೯.೯೧
೧೯೭೭–೭೮	೧೨೩.೦೬
೧೯೭೮–೭೯	೧೨೩.೪೨
೧೯೭೯–೮೦	೬೧.೭೦
೧೯೮೦–೮೧	೨೭೯.೧೪
೧೯೮೧–೮೨	೪೩೭.೬೭
೧೯೮೨–೮೩	೬೩೬.೯೬
	(ತಾತ್ಪೂರ್ವಿಕ)

ಉ) ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ :—

೧. ಪ್ರಯಾಣ ದರಗಳ ಪರಿಷ್ಕರಣೆ

೨. ನಗರ ಕಾರ್ಪೊರೇಷನ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಸರ್ಕಾರದ ಸಹಾಯಧನ.

೩. ವಾಹನ ಕಾರ್ಯಾಚರಣೆಯಲ್ಲಿ ಪ್ರಗತಿ

೪. ವೆಚ್ಚದಲ್ಲಿ ಕಡಿತ, ಆದಾಯವನ್ನು ಹೆಚ್ಚಿಸುವುದು ಮತ್ತು ಹಣ ಸೋರುವಿಕೆಯನ್ನು ತಡೆಗಟ್ಟುವುದು.

೫. ನಿಗದಿತ ಸಿಬ್ಬಂದಿ ವ್ಯವಸ್ಥೆಯನ್ನು ಕಂಡುಹಿಡಿದು ಸಿಬ್ಬಂದಿ ಪ್ರಮಾಣವನ್ನು ಕಮ್ಮಿ ಮಾಡುವುದು.

ಊ) ಇಂತಹ ಯಾವ ಪ್ರಸ್ತಾಪವೂ ಸದ್ಯಕ್ಕೆ ಸರಕಾರದ ಮುಂದೆ ಇಲ್ಲ.

ಋ) (ಊ) ಭಾಗಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೂಡ್ಲಗಿಯಲ್ಲಿ ನೂಲು ಬಿಚ್ಚುವ ಘಟಕವನ್ನು ಸ್ಥಾಪಿಸುವ ಬಗ್ಗೆ

೧೬೨೨ (೮೨) ಕೆ. ಚೆನ್ನಬಸವನಗೌಡ (ಕೂಡಲಗಿ).—ಮಾನ್ಯ ಸಮಾಜಕಲ್ಯಾಣ ಮತ್ತು ರೇಷ್ಮೆ ಖಾತೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ ?

ಕೂಡ್ಲಿಗಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ರೇಷ್ಮೆ ವ್ಯವಸಾಯ ಹೆಚ್ಚಾಗಿರುವುದರಿಂದ ಸರ್ಕಾರದವರು ಕೂಡ್ಲಗಿಯಲ್ಲಿ ನೂಲು ಬಿಚ್ಚುವ ಯಂತ್ರವನ್ನು ಸ್ಥಾಪಿಸುವರೆ ?

ಶ್ರೀಮತಿ ಚಂದ್ರಪ್ರಭಾ ಅರಸ್.—(ಸಮಾಜ ಕಲ್ಯಾಣ ಮತ್ತು ರೇಷ್ಮೆ ಮಂತ್ರಿಗಳು).—ಇಲ್ಲ.

ಆದರೂ ಬರಗಾಲ ಪೀಡಿತ ಪ್ರದೇಶಗಳ ಯೋಜನೆಯಲ್ಲಿ ೧೦ ಬೇಸಿನ್‌ಗಳ ಒಂದು ನೂಲು ಬಿಚ್ಚುವ ಘಟಕವನ್ನು ಬಳ್ಳಾರಿ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಸ್ಥಾಪಿಸಲು ಉದ್ದೇಶಿಸಲಾಗಿದೆ.

(೧೧೬) ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೆ. ಎಸ್. ಆರ್. ಟಿ. ಸಿ. ಗೆ ಸೇರಿದ ಮಡಿಕೇರಿ ಡಿಪೋ ಹೊಂದಿರುವ ಮಾರ್ಗಗಳಿಷ್ಟು